ಬಂತು. ಅವರು ಫಾರೆಸ್ಟ್ ಆಫೀಸರನಿಗೆ ಕಡತ ಸಮೇತ ಬರಲು ಆಜ್ಞಾಪಿಸಿದರು. ಅವರೊಂದಿಗೆ ಮಾತನಾಡಿದ ಫಲವಾಗಿ ಯಾವುದೇ ಗಲಭೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಪೊಲೀಸರ ಒಂದು ತುಕಡಿಯನ್ನು ಅಲ್ಲಿಡಲು ಡಿಸಿಯವರು ಆರ್ಡರು ಮಾಡಿದರು. ಹಾಗಾಗಿ ಪೂಜೆಯ ದಿನ ಬೆಳಗ್ಗೆ ಬೆಳಗ್ಗೆ ಪೊಲೀಸರ ಒಂದು ನೀಲಿ ವ್ಯಾನು ಊರಿಗೆ ಬಂದು ಮೂಸಬ್ಬನ ಅಂಗಡಿಯ ಎದುರು ನಿಂತುಕೊಂಡಿತು. ಅವನಿಗೆ ಅದನ್ನು ಕಂಡು ಎದೆಯಲ್ಲಿ ಡವಡವ. ಆದರೆ ಅವನು ಅದನ್ನು ಯಾರಿಗೂ ತೋರಿಸಿಕೊಡಲಿಲ್ಲ.

ಪೂಜೆ ಇದ್ದುದರಿಂದ ಎರಡು ಮೂರು ದಿನಗಳ ಮೊದಲೇ ಅಲ್ಲಿ ಸಂಭ್ರಮದ ವಾತಾವರಣ ಸಿದ್ಧವಾಗಿತ್ತು. ಕೆಲವು ಉತ್ಸಾಹೀ ಹುಡುಗರು ಮುದಿಮರವನ್ನು ಸಿಂಗರಿಸಿದ್ದರು. ಅಲ್ಲಿಂದ ರಸ್ತೆಯ ಉದ್ದಕ್ಕೂ ದಾರ ಕಟ್ಟಿ ತ್ರಿಕೋನಾಕಾರದ ಬಣ್ಣದ ಕಾಗದಗಳನ್ನು ಅಂಟಿಸಿ ಅಲಂಕಾರ ಮಾಡಿದ್ದರು. ಊರಿನ ಸಮಸ್ತರೂ ಬಂದಿದ್ದರು. ಜಾತಿಮತ ಕೀಳೆನ್ನದೇ ಗಂಡಸರು ಹೆಂಗಸರೆನ್ನದೆ ಎಲ್ಲರೂ ನೆರೆದಿದ್ದರು. ಎಲ್ಲರಿಗೂ ಹೊಸ ಬಟ್ಟೆ. ಹೆಂಗಸರು ಮೈ ತುಂಬಾ ಬಂಗಾರ ಧರಿಸಿದ್ದರೆ ಗಂಡಸರು ಬಿಳಿಯ ಮುಂಡು, ಕುರ್ತಾ ಹಾಕಿ ಹೆಗಲ ಮೇಲೊಂದು ಶಾಲು ಹಾಕಿ ಕೆಲಸವೇನೂ ಇಲ್ಲದಿದ್ದರೂ ಅತ್ತಿತ್ತ ಓಡಾಡುತ್ತಿದ್ದರು. ಇದು ಒಂದು ಅಪರೂಪದ ಘಟನೆಯಾದುದರಿಂದ ಜಿಲ್ಲಾ ಕೇಂದ್ರದಿಂದ ಕೆಲವು ಪತ್ರಕರ್ತರೂ ಬಂದಿದ್ದರು. ಯಾರೋ ವ್ಯವಸ್ಥೆ ಮಾಡಿದರೆಂದು ಒಂದು ದೊಡ್ಡ ಪಾತ್ರೆಯಲ್ಲಿ ಕೆಂಪು ಅರಿಸಿನ ಬಣ್ಣದ ಶರಬತ್ತನ್ನು ಪ್ಲಾಸ್ಟಿಕ್ ಗ್ಲಾಸಿನಲ್ಲಿ ಹಾಕಿ ಕೊಡುತ್ತಿದ್ದುದರಿಂದ ಎಲ್ಲರಿಗೂ ಬಾಯಾರಿಕೆಯ ಚಿಂತೆಯಿರಲಿಲ್ಲ. ಶರಬತ್ತು ಆಗದವರು ಮೂಸಬ್ಬನ ಅಂಗಡಿಯಿಂದಲೇ ಚಾ ಹೀರುತ್ತ ಕೂತಿದ್ದರು.

ಅಲ್ಲಿ ಗಮನಕ್ಕೆ ಬಾರದವರೆಂದರೆ ಒಬ್ಬ ಮೂಸಬ್ಬ ಮತ್ತು ಇನ್ನೊಬ್ಬ ಫಾರೆಸ್ಟ್ ಗಾರ್ಡ್. ಆತ ಡಿಪಾರ್ಟ್‌ಮೆಂಟಿನಿಂದ ನಿರ್ದೇಶನ ಪಡೆದು ಬಂದುದರಿಂದ ಕೈಯಲ್ಲಿ ಒಂದು ಕೊಡಲಿ ಹಿಡಿದು ಬಂದಿದ್ದ. ಬಂದವನನ್ನು ಯಾರೂ ಮಾತಾಡಿಸಲಿಲ್ಲ. ಮೂಸಬ್ಬನೇ ಅವನನ್ನು ಕರೆದು ಮರದ ಕುರ್ಚಿಯ ಮೇಲೆ ಕೂರಿಸಿ ಮುಫತ್ತಾಗಿ ಚಾ ಕೊಟ್ಟು ಜೊತೆಗೆ ಒಂದು ಬೀಡಿಯನ್ನೂ ಕೊಟ್ಟಿದ್ದ. ಆತ ಅದರಲ್ಲೇ ಗರ್ಕನಾಗಿದ್ದ. ಮೂಸಬ್ಬನಿಗೆ ಹೊರಗಿನ ಈ ಸಂಭ್ರಮವೆಲ್ಲ ಕಣ್ಣಿಗೆ ರಾಚುತ್ತಿತ್ತು. ಒಂದು ಮರ ಕಡಿಯಲು ಇದೆಲ್ಲ ಅಗತ್ಯವಿದೆಯೇ ಎಂದು ತನ್ನನ್ನು ತಾನು ಕೇಳಿಕೊಂಡಿದ್ದ. ಈಗಾಗಲೇ ಅವನಿಗೆ ಸುಮಾರು ಐನೂರು ರೂಪಾಯಿಗಳಷ್ಟು ಖರ್ಚಾಗಿತ್ತು. ಫಾರೆಸ್ಟ್ ಆಫೀಸರನಿಗೆ ಕೊಟ್ಟ ಕವರಿನಲ್ಲಿ ಹಾಕಿದ ಇನ್ನೂರು, ಮೊದಲ ಬಾರಿಗೆ ಹೋಗುವಾಗ ಕಾರಿಗೆ ಹಾಕಿದ ಪೆಟ್ರೋಲು, ಇದೇ ಗಾರ್ಡನಿಗೆ ಪ್ರತಿಬಾರಿ ಹೋದಾಗಲೂ ತಿನ್ನಿಸಿದ ಇಡ್ಲಿವಡೆ, ಕಾಫಿಯ ಖರ್ಚು ಹೀಗೆಂದು ಲೆಕ್ಕ ಹಾಕಿದರೆ ಆಗುವುದಿಲ್ಲವೇ? ನಾಳೆ ವಿನಾಕಾರಣ ಕಟ್ಟಿದ ಈ ತೋರಣ ಎಂದು ಆ ಉತ್ಸಾಹೀ ಹುಡುಗರು ಬಂದು ಖರ್ಚಿನ ಪಟ್ಟಿ ಕೊಟ್ಟರೆ ಅದನ್ನೂ ಕಕ್ಕ ಬೇಕಾಗುತ್ತದೋ ಏನೋ ಎಂದೇ ಅವನಿಗೆ ಆತಂಕವಾಗಿತ್ತು. ಇದಕ್ಕಿಂತ ಸುಮ್ಮನೆ ಯಾರಿಗೂ ಹೇಳದೆ ಒಂದು ದಿನ ಕೊಡಲಿ ಹಿಡಿದು ತಾನೇ ಈ ಮರ ಕಡಿದು ಉರುಳಿಸಿದ್ದರೆ ಒಳ್ಳೆಯದಿತ್ತು ಎಂಬ ಭಾವನೆ ಅವನಿಗೆ ಬಂದಿತ್ತು. ಹೆಚ್ಚೆಂದರೆ ಏನಾಗಬಹುದು? ತನ್ನನ್ನು ನೇಣು ಹಾಕುತ್ತಿದ್ದರೇ? ಪಂಚಾಯತ್‌ನವರೋ ಫಾರೆಸ್ಟ್‌ನವರೋ ಒಂದು ಇನ್ನೂರು ರೂಪಾಯಿ ದಂಡ ಹಾಕುತ್ತಿದ್ದರು, ಅಷ್ಟೇ. ಆದುದರಿಂದ ಅವನು ಒಂದು ಶಬ್ದವನ್ನೂ ಮಾತನಾಡದೇ ಎಲ್ಲವನ್ನೂ ನೋಡುತ್ತಾ ನಿಂತಿದ್ದ.